# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | : ಶ್ರೀಮತಿ ಭಾರತಿ ಶೆಟ್ಟಿ<br>(ನಾಮ ನಿರ್ದೇಶನ ಹೊಂದಿದವರು) |
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : 739 |
| ಉತ್ತರಿಸಬೇಕಾದ ದಿನಾಂಕ | : 22.02.2023 |
| ಉತ್ತರಿಸಬೇಕಾದ ಸಚಿವರು | : ಮಾನ್ಯ ಪಶುಸಂಗೋಪನೆ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಹಸುಗಳಿಗೆ ಕಾಲ-ಕಾಲಕ್ಕೆ ಬರುತ್ತಿರುವ ವಿವಿಧ ಖಾಯಿಲೆಗಳು ಯಾವುವು' ಇವುಗಳಿಗೆ ಅನುಸರಿಸುತ್ತಿರುವ ಚಿಕಿತ್ಸೆ ಕ್ರಮಗಳ ವಿವರಗಳನ್ನು ಒದಗಿಸುವುದು. | ರಾಜ್ಯದಲ್ಲಿ ಹಸುಗಳಿಗೆ ಮುಖ್ಯವಾಗಿ ಬರುತ್ತಿರುವ ಖಾಯಿಲೆಗಳು ಕಾಲುಬಾಯಿ ಜ್ವರ, ಗಂಟಲು ಬೇನೆ, ಚಪ್ಪೆರೋಗ, ನೆರಡಿ ರೋಗ, ಕಂದು ರೋಗ ಮತ್ತು ಚರ್ಮಗಂಟು ರೋಗ.<br>ವಿವರಗಳನ್ನು **ಅನುಬಂಧ -1** ರಲ್ಲಿ ನೀಡಿದೆ. |
| ಆ | ಕಳೆದ 10 ವರ್ಷಗಳಲ್ಲಿ ನಮ್ಮ ರಾಜ್ಯದಿಂದ ರಫ್ತಾಗುತ್ತಿರುವ (export) ಹಾಲು ಹಾಗೂ ಅದರ ಉತ್ಪನ್ನಗಳ ವಿವರ ಒದಗಿಸುವುದು; | ಕಳೆದ 10 ವರ್ಷಗಳಲ್ಲಿ ಕರ್ನಾಟಕ ಹಾಲು ಮಹಾಮಂಡಳದಿಂದ ನಂದಿನಿ ಉತ್ಪನ್ನಗಳ ರಫ್ತಿನ ವಿವರದ ಪಟ್ಟಿಯನ್ನು **ಅನುಬಂಧ-2** ರಲ್ಲಿ ನೀಡಿದೆ. |
| ಇ | ಈ ರೀತಿ ರಫ್ತಾದ ಹಾಲು ಮತ್ತು ಅದರ ಉತ್ಪನ್ನಗಳು ಯಾವ ದೇಶಗಳಿಂದ, ಯಾವ ಕಾರಣಗಳಿಗೆ ತಿರಸ್ಕೃತವಾಗಿವೆ; ಇದಕ್ಕೆ ಕಾರಣಗಳೇನು; ಇದಕ್ಕೆ ಕಂಡುಕೊಂಡ ಪರಿಹಾರೋಪಾಯಗಳೇನು; | ಕರ್ನಾಟಕ ಹಾಲು ಮಹಾಮಂಡಳದಿಂದ ರಫ್ತಾಗಿರುವ ನಂದಿನಿ ಹಾಲಿನ ಉತ್ಪನ್ನಗಳು ತಿರಸ್ಕೃತಗೊಂಡಿರುವುದಿಲ್ಲ. |
| ಈ | ಕೆಚ್ಚಲು ಬಾವು ರೋಗಕ್ಕೆ ತುತ್ತಾದ ಹಸುಗಳಿಗೆ ಪ್ರಸ್ತುತ ನೀಡುತ್ತಿರುವ ಚಿಕಿತ್ಸಾ ಕ್ರಮಗಳೇನು; ಹಾಗೂ ಎಷ್ಟು ದಿನಗಳ ಕಾಲ ಇಂತಹ ಹಸುಗಳಿಂದ ಹಾಲು ಸಂಗ್ರಹಣೆ ನಿಲ್ಲಿಸಲಾಗುವುದು? | ಕೆಚ್ಚಲು ರೋಗಕ್ಕೆ ಸಾಮಾನ್ಯವಾಗಿ ಆಂಟಿಬಯೋಟಿಕ್ಸ್, ನೋವು ನಿವಾರಕಗಳು, ಆಂಟಿಬಯೋಟಿಕ್ ಟ್ಯೂಬ್‌ಗಳನ್ನು ಬಳಸಿ ಚಿಕಿತ್ಸೆ ನೀಡಲಾಗುತ್ತಿದೆ. ಅವಶ್ಯ ಸಂದರ್ಭಗಳಲ್ಲಿ ಹಾಲಿನಲ್ಲಿ ಇರುವ ರೋಗಾಣುವನ್ನು ಪತ್ತೆ ಹಚ್ಚಿ (Sensitivity & Culturing) ನಿರ್ದಿಷ್ಟವಾದ ಆಂಟಿಬಯೋಟಿಕ್ ಬಳಸಿ ಚಿಕಿತ್ಸೆ ನೀಡಲಾಗುವುದು.<br>ಕೆಚ್ಚುಲು ಬಾವು ರೋಗಕ್ಕೆ ತುತ್ತಾದ ಹಸುಗಳಿಂದ ಕೆಚ್ಚಲು ಬಾವು ಪೂರ್ಣ ಗುಣಮುಖವಾದ ನಂತರ ಸಾಮಾನ್ಯವಾಗಿ 5 ದಿನ ಹಾಲು ಸಂಗ್ರಹಣೆ ನಿಲ್ಲಿಸಲಾಗುವುದು. |

**ಇ-ಪಸಂಮೀ 58 ಸಲೆವಿ 2023**

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:739 ಕ್ಕೆ ಅನುಬಂಧ-1**

ಹಸುಗಳಲ್ಲಿ ಕಾಲಕಾಲಕ್ಕೆ ಕಾಣಿಸಿಕೊಳ್ಳುತ್ತಿರುವ ವಿವಿಧ ಖಾಯಿಲೆಗಳು

| ಕ್ರಮ ಸಂಖ್ಯೆ | ರೋಗದ ಹೆಸರು | ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಕಾಲ | ಚಿಕಿತ್ಸಾ ವಿಧಾನ | ನಿಯಂತ್ರಣ |
|---|---|---|---|---|
| 1) | ಕಾಲು ಬಾಯಿ ಜ್ವರ | ಅಕ್ಟೋಬರ್-ನವಂಬರ್ | ನಿರ್ದಿಷ್ಟ ಚಿಕಿತ್ಸೆ ಇರುವುದಿಲ್ಲ | 6 ತಿಂಗಳಿಗೊಮ್ಮೆ ಲಸಿಕೆ ಹಾಕುವುದು |
| 2) | ಗಂಟಲು ಬೇನೆ | ಮೇ-ಜೂನ್ | ಸೂಕ್ತವಾದ ಆಂಟಿಬಯಾಟಿಕ್ ಬಳಸುವುದು | ವರ್ಷಕ್ಕೆ 2 ಬಾರಿ ಲಸಿಕೆ ಹಾಕುವುದು |
| 3) | ಚಪ್ಪೆ ರೋಗ | ಮೇ-ಜೂನ್ | | ವರ್ಷಕ್ಕೆ 1 ಬಾರಿ ಲಸಿಕೆ ಹಾಕುವುದು |
| 4) | ನೆರಡಿ ರೋಗ | ಮೇ-ಜೂನ್ | | |
| 5) | ಬ್ರುಸೆಲ್ಲೋಸಿಸ್ | - | ಜಾನುವಾರುಗಳಿಗೆ ಚಿಕಿತ್ಸೆ ನೀಡಲಾಗುವುದಿಲ್ಲ | 4-8 ತಿಂಗಳ ವಯೋಮಾನದ ಹೆಣ್ಣು ಕರುಗಳಿಗೆ ಲಸಿಕೆ ಹಾಕುವುದು |
| 6) | ಚರ್ಮಗಂಟು ರೋಗ | - | ನಿರ್ದಿಷ್ಟ ಚಿಕಿತ್ಸೆ ಇರುವುದಿಲ್ಲ | ರೋಗೋದ್ರೇಕದ ಸಂದರ್ಭದಲ್ಲಿ ಲಸಿಕೆ ಹಾಕುವುದು |

# ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:739 ಕ್ಕೆ ಅನುಬಂಧ-2

**ಕಳೆದ 10 ವರ್ಷಗಳಿಂದ ಕರ್ನಾಟಕ ಹಾಲು ಮಹಾಮಂಡಳವು ರಫ್ತು ಮಾಡಿರುವ ಹಾಲು ಮತ್ತು ಹಾಲು ಉತ್ಪನ್ನಗಳ ವಿವರ**

| ಕಹಾಮ | 2013-14 | | 2014-15 | | 2015-16 | | 2016-17 | | 2017-18 | | 2018-19 | | 2019-20 | | 2020-21 | | 2021-22 | | 2022-23 | |
|---|---|---|---|---|---|---|---|---|---|---|---|---|---|---|---|---|---|---|---|---|
| | ಪ್ರಮಾಣ | ರೂ. ಕೋಟಿಗಳಲ್ಲಿ | ಪ್ರಮಾಣ | ರೂ. ಕೋಟಿಗಳಲ್ಲಿ | ಪ್ರಮಾಣ | ರೂ. ಕೋಟಿಗಳಲ್ಲಿ | ಪ್ರಮಾಣ | ರೂ. ಕೋಟಿಗಳಲ್ಲಿ | ಪ್ರಮಾಣ | ರೂ. ಕೋಟಿಗಳಲ್ಲಿ | ಪ್ರಮಾಣ | ರೂ. ಕೋಟಿಗಳಲ್ಲಿ | ಪ್ರಮಾಣ | ರೂ. ಕೋಟಿಗಳಲ್ಲಿ | ಪ್ರಮಾಣ | ರೂ. ಕೋಟಿಗಳಲ್ಲಿ | ಪ್ರಮಾಣ | ರೂ. ಕೋಟಿಗಳಲ್ಲಿ | ಪ್ರಮಾಣ | ರೂ. ಕೋಟಿಗಳಲ್ಲಿ |
| ಯು.ಹೆಚ್.ಟಿ ಹಾಲು | 546048 | 2 | 1060008 | 4 | 855444 | 3.25 | 651525 | 2.5 | 805555 | 3.06 | 740220 | 2.81 | 974196 | 4.0 | 859224 | 3.5 | 519096 | 2.23 | 743820 | 3.5 |
| ಕೆನೆರಹಿತ/ ಕೆನೆಭರಿತ ಹಾಲಿನ ಪುಡಿ | 9200 | 190 | NA | NA | NA | NA | 100 | 2.5 | NA | NA | NA | NA | NA | NA | 350000 | 5.06 | 900000 | 15.11 | NA | NA |
| ಬೆಣ್ಣೆ | NA | NA | NA | NA | NA | NA | NA | NA | NA | NA | NA | NA | NA | NA | NA | NA | 25000 | 0.65 | NA | NA |